ಕೂಡಲೇ ಅದು ಪವಿತ್ರವಾಗುತ್ತದೆ ಎಂದು ನಾಗಚಂದ್ರ ಭಾವಿಸಿದಂತಿಲ್ಲ. ಆದ್ದರಿಂದ ಎಲ್ಲೂ ಧರ್ಮ ಸಮರ್ಥನೆಯ ಮೊಂಡುವಾದ ಕಾಣಬರುವುದಿಲ್ಲ. ವನವಾಸಕ್ಕೆ ಹೊರಟುನಿಂತ ರಾಮ ಹೀಗೆ ಹೇಳುತ್ತಾನೆ: 'ಪುಸಿ ಪೊಲನಲ್ತು ನಾಲಗೆಗೆ, **ಪಂದೆತನಂ ಮೊಚಿಯಲ್ತು** ಕೈಯ ಕೂರಸಿಗೆ.' ಇದರ ಅರ್ಥವಿದು: ಸುಳ್ಳು ನಾಲಗೆಗೆ ತಕ್ಕುದಲ್ಲ, ಕೈಯ ಮೊನಚಾದ ಖಡ್ಗಕ್ಕೆ ಹೇಡಿತನವು ಶೋಭೆಯಲ್ಲ. ಅವನ ಕಾವ್ಯಕಲ್ಪನೆಯ ಪದ್ಯವೊಂದು ಹೀಗಿದೆ:

ನಾಯಕನನ್ಯನಾಗೆ ಕೃತಿ ವಿಶ್ರುತ ಮಾಗದುದಾತ್ತರಾಘವಂ
ನಾಯಕನಾಗೆ ಕೃತಿ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತುಕಾ
ಳಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನ ಮಾಲೆಯಂತುಪಾ
ದೇಯಮೆನಿಕ್ಕುಮೇ ವಿಷಯಮೊಪ್ಪದೊಡಾವುದುಮೊಪ್ಪಲಾರ್ಕುಮೇ.

ಈ ಪದ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದು ಮುಖ್ಯ ವಿಷಯ ಗಮನಕ್ಕೆ ಬರುತ್ತದೆ. 'ನಾಯಕನನ್ಯನಾಗೆ' ಎಂದರೆ, ಮಹಾಭಾರತ ಅಥವಾ ರಾಮಾಯಣದ ನಾಯಕರಲ್ಲ. ಲೌಕಿಕ ಕಾವ್ಯ ಪರಂಪರೆಯಲ್ಲಿ ಅನಿವಾರ್ಯವಾಗಿ ಕಥೆಯೊಳಗೆ ಸಮೀಕೃತವಾಗುತ್ತಿದ್ದ ಆಶ್ರಯದಾತರಾದ ಅರಸರು ಎಂದರ್ಥ. ಆ ಕಾರಣದಿಂದಾಗಿ ಮೂಲಭಾರತ ಕಥೆಯನ್ನೇ ಕವಿಗಳು ಬದಲು ಮಾಡಬೇಕಾಯಿತು; ಅದರಿಂದ ಕೆಲವು ವಿರೋಧಾಭಾಸಗಳೂ ಸಂಭವಿಸಿದವು. ಈ ಎಲ್ಲಾ ಅರಕೆಗಳನ್ನು ಗಮನಿಸಿದ್ದ ನಾಗಚಂದ್ರ ಲೌಕಿಕ ಕಥನದ ಕಡೆ ಆಸಕ್ತಿ ತೋರದೆ, ಅರಸ ಮತ್ತು ನಾಯಕನ ಸಮೀಕರಣ ಪ್ರಕ್ರಿಯೆಯ ಆಚೆಯಲ್ಲಿದ್ದ ರಾಮನನ್ನು ಕಥಾನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿದ್ದು ಒಂದು ಅಪರೂಪದ ಪ್ರಯತ್ನ ಎನಿಸುತ್ತದೆ.

ಅಷ್ಟೇ ಅಲ್ಲ, ನಾಗಚಂದ್ರನಿದ್ದ ಕಾಲ ಕೂಡ ಅನೇಕ ಸ್ಥಿತ್ಯಂತರಗಳನ್ನು ಕಂಡಿತ್ತು. ಅವನು ಹೊಯ್ಸಳ ಬಲ್ಲಾಳನ ಆಸ್ಥಾನದಲ್ಲಿದ್ದರೂ, ಅದು ಪ್ರಭುತ್ವದ ಇಳಿಗಾಲ. 12ನೆಯ ಶತಮಾನದ ವಚನಾಂದೋಲನದ ಪರಿಣಾಮಗಳನ್ನು ಗಮನಿಸಿದ್ದ ಅವನಿಗೆ, ಒಂದು ಬಗೆಯ ಒಳತಿಳಿವು ಮೂಡಿತ್ತು. ಸಮಕಾಲೀನ ರಾಜರುಗಳನ್ನು ಪ್ರಸಿದ್ಧ ಪುರಾಣ ವ್ಯಕ್ತಿಗಳೊಡನೆ ಹೋಲಿಸುವುದು ಅಷ್ಟು ಸಮಂಜಸವಲ್ಲ ಎನಿಸಿರಬೇಕು. ಜೊತೆಗೆ ರಾಜ್ಯದಾಹ, ದ್ವೇಷ, ಕದನದಂಥ ಮಹಾಭಾರತ ಆತನಲ್ಲಿ ಕುತೂಹಲವನ್ನು ಉಂಟುಮಾಡದೇ ಇರಬಹುದು. ಅದೇ ವೇಳೆಗೆ, ವಾಲ್ಮೀಕಿ ರಾಮಾಯಣದೊಳಗಿನ ಕೋಪ, ಶಾಪ, ಹಿಂಸೆಗಳನ್ನು ದಾಟಿದ ಅಹಿಂಸಾತತ್ತ್ವವನ್ನು ಪ್ರತಿಪಾದಿಸುವ ಉಮೇದು ಅವನಲ್ಲಿ ಉಂಟಾಗಿರುವ ಸಾಧ್ಯತೆಗಳಿವೆ. ನಾಗಚಂದ್ರನ ಕಾಲಕ್ಕೆ ಜೈನಕಾವ್ಯ ಪರಂಪರೆ ಪಕ್ವವಾಗಿ ಬೆಳೆದಿತ್ತು. ಆದರೆ, ಜೈನಧರ್ಮದ ಪ್ರಾಚುರ್ಯ ಕಡಿಮೆಯಾಗಿತ್ತು. ಇಂಥ ಸಂದಿಗ್ಧ ಸಂದರ್ಭದಲ್ಲಿ ಜೈನ ಧರ್ಮದ ಹೆಚ್ಚುಗಾರಿಕೆಯನ್ನು ಪ್ರತಿಷ್ಠಾಪಿಸುವ ಅಗತ್ಯವಿತ್ತು. ಹಾಗೆಯೇ ಹಿಂದೂಗಳೊಡನೆ ಸಮನ್ವಯ ಸಾಧಿಸಲು ಅವರಿಗೆ ಅತ್ಯಂತ ಪವಿತ್ರವೆನಿಸಿದ್ದ ರಾಮಾಯಣದ ಕಥೆಯೂ ಬೇಕಿತ್ತು. ಆ ಮೂಲಕ ರಾಮನನ್ನು ಗೌರವಿಸುವ ಭಕ್ತಸಮುದಾಯದ ಮಧ್ಯೆ, ಜೈನ ತತ್ತ್ವಗಳನ್ನು ಸಹನೀಯಗೊಳಿಸುವ ಉದ್ದೇಶವನ್ನು ಕವಿ ಈಡೇರಿಸಿದ್ದಾನೆ. ಆ ನಿಟ್ಟಿನಲ್ಲಿ ರಾಮಾಯಣದ ಮೂಲ ಪಠ್ಯ ಬದಲಾಗಿ ರಾವಣನ ಪಾತ್ರವನ್ನು ಉದಾತ್ತೀಕರಿಸುವ ಮಾರ್ಪಾಡುಗಳು ನಡೆಯುತ್ತವೆ.

'ರಾಮಚಂದ್ರಚರಿತ ಪುರಾಣ' ಮೇಲುನೋಟಕ್ಕೆ ರಾಮನ ಕಥೆ ಎನಿಸಿದರೂ, ಒಳವಿನ್ಯಾಸದಲ್ಲಿ ವಿಭಿನ್ನ ಆಯಾಮಗಳನ್ನುಳ್ಳ ಕಾವ್ಯ. ಅದು ವೈದಿಕ ರಾಮಾಯಣಕ್ಕೆ ಪ್ರತಿಯಾಗಿ ಹೆಣೆದದ್ದು. ಅಲ್ಲಿ ರಾಮ – ರಾವಣರಿಬ್ಬರೂ ಉದಾತ್ತರೆ! ಮೂಲದಲ್ಲಿ ರಾವಣನನ್ನು ದುಷ್ಟನೆಂದು ಚಿತ್ರಿಸಿ,